# ಸಿಡಿಮಿಡಿ ಸಿದ್ದುನ ರೋಚಕತೆ

◆ **ಅಭಿನಯಕ್ಕೆ ವಾಲಿದ್ದು ಹೇಗೆ?**

ತುರುವೇಕೆರೆ ತಾಲ್ಲೂಕಿನ ತಳವಾರನಹಳ್ಳಿಯಿಂದ ಏನಾದರೂ ಸಾಧನೆ ಮಾಡಬೇಕು ಎಂಬ ಹುಮ್ಮಸ್ಸಿನಿಂದ 11 ವರ್ಷದ ಹಿಂದೆ ಸಿನಿಮಾರಂಗಕ್ಕೆ ಬಂದೆ. ಆರಂಭದಲ್ಲೇ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದೆ. ಮನೆಯನ್ನು ಬಿಟ್ಟುಬರಲು ಹಣಕಾಸಿನ ತೊಂದರೆಯೂ ಕಾರಣವಾಗಿತ್ತು. ಗಾಂಧಿನಗರದಲ್ಲಿ ಬದುಕು ಕಷ್ಟ ಆಯಿತು ಅಂತ ಸುದ್ದಿ ಮಾಧ್ಯಮದಲ್ಲಿ ಕೆಲಸ ಮಾಡುವ ಅನಿವಾರ್ಯತೆ ಬಂತು. ಹಿನ್ನೆಲೆ ಧ್ವನಿಯನ್ನು ನೀಡಲು ಶುರುಮಾಡಿದೆ. ನಂತರ 8 ವರ್ಷಗಳ ಕಾಲ ಕಾರ್ಯಕ್ರಮಗಳ ನಿರ್ದೇಶಕನಾಗಿ, ಸ್ಕ್ರಿಪ್ಟ್ ಬರಹಗಾರನಾಗಿ ತೊಡಗಿಕೊಂಡೆ. ಮೂಲತಃ ನಾನೊಬ್ಬ ಮಿಮಿಕ್ರಿ ಕಲಾವಿದ. ಸುಮಾರು 40 ಧ್ವನಿಗಳನ್ನು ಅನುಕರಣೆ ಮಾಡುತ್ತೇನೆ. 2000ಕ್ಕೂ ಅಧಿಕ ಕಾರ್ಯಕ್ರಮಗಳನ್ನು ನೀಡಿದ್ದೇನೆ. 'ಮರಳಿ ಮನಸಾಗಿದೆ' ಮೂಲಕ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿತು. ಅದು ಅಭಿನಯದ ಪ್ರೇಮವನ್ನು ಹುಟ್ಟಿಸಿತು. ಇದನ್ನೇ ಮಾಡಬೇಕು ಎನ್ನುವ ಸಂಕಲ್ಪ ಮಾಡುವಷ್ಟರಲ್ಲಿ 'ಮೈನಾ'ದಲ್ಲಿ ಒಳ್ಳೆಯ ಪಾತ್ರ ಸಿಕ್ಕಿದೆ.

◆ **ಸಿದ್ದುಗೆ ಕಥೆಯಲ್ಲಿ ಮಹತ್ವ ಎಷ್ಟಿದೆ?**

ಎಲ್ಲರನ್ನೂ ನಗಿಸುವ ಸ್ವಭಾವದ ನಾನು ಪಾತ್ರವಾಗಿ ಸಿಡಿಮಿಡಿಗೊಳ್ಳುತ್ತಿರುತ್ತೇನೆ. ಅದಕ್ಕೆ ಎಲ್ಲ ಸಿಡಿಮಿಡಿ ಸಿದ್ದು ಎಂದೇ ಕರೆಯುತ್ತಾರೆ. ಇದರಲ್ಲಿ ಮೈನಾಳ ಅಣ್ಣನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಮೈನಾಳ ಬದುಕಿನಲ್ಲಿ ಏನೆಲ್ಲ ಬದಲಾವಣೆಯನ್ನು ಮಾಡುತ್ತೇನೆ ಎನ್ನುವುದೇ ಇದರ ಬಹುಮುಖ್ಯ ಅಂಶ. ಇಂತಹ ಗುಣಗಳ ವ್ಯಕ್ತಿತ್ವ ಪ್ರತಿ ಮನೆಯಲ್ಲೂ ಇರುಲು ಸಾಧ್ಯತೆ ಇದೆ. ಸಮಯ ಸಂದರ್ಭ ಎಂತಹವರನ್ನೂ ದುಷ್ಟರನ್ನಾಗಿ ಮಾಡಬಲ್ಲದು. ಕೆಲವೊಂದು ಸಂದರ್ಭಗಳು ದುಡುಕಿನ ನಿರ್ಧಾರಕ್ಕೆ ಕಾರಣವಾಗುತ್ತವೆ. ಅದರಿಂದ ಎಷ್ಟೆಲ್ಲ ಕಷ್ಟಗಳನ್ನು ಬೇರೆಯವರು ಅನುಭವಿಸಬೇಕಾಗುತ್ತದೆ ಎನ್ನುವುದನ್ನು ಈ ಪಾತ್ರ ಅರ್ಥಮಾಡಿಸುತ್ತದೆ. ಇದನ್ನು ನೋಡಿದಾಗ ಈ ರೀತಿ ಮಾಡಬಾರದು ಎನ್ನುವುದು ಮನವರಿಕೆ ಆಗುತ್ತದೆ. ಮೈನಾ ತುಂಟಾಟದ ಹುಡುಗಿ. ಊರಲ್ಲಿ ಆರಾಮಾಗಿ ಮಕ್ಕಳ ಜೊತೆ ಆಟ ಆಡಿಕೊಂಡು ಇದ್ದವಳು. ಆಕೆ ಚಿಕ್ಕವಯಸ್ಸಲ್ಲೇ ಮನೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಅನಿವಾರ್ಯ ಸಂದರ್ಭ ಎದುರಾಗುತ್ತದೆ. ಮಗ ನಿರ್ವಹಿಸಬೇಕಾಗಿದ್ದ ಕೆಲಸವನ್ನು ಆಕೆ ಮಾಡುತ್ತಾಳೆ. ನನ್ನ ತಪ್ಪಿನಿಂದ ಆಕೆ ಬೆಂಗಳೂರಿಗೆ ಬರುತ್ತಾಳೆ. ಅವಳ ಬದುಕಿನ ಎಲ್ಲ ಹಂತದಲ್ಲಿ ನನ್ನ ಪಾತ್ರ ಇದೆ. ಎಲ್ಲ ಮೈನಾ ಸಿದ್ದು ಎಂದೇ ಹೇಳುತ್ತಾರೆ.

**ಸಾಗರ್ ತುರುವೇಕೆರೆ**
**ಉದಯದ 'ಮೈನಾ' ಸಿದ್ದು**



◆ **ತೆರೆಯ ಹಿಂದೆ ಇದ್ದ ಕ್ರಿಯಾಶೀಲ ಕೆಲಸಕ್ಕೆ ತೆರೆಯ ಮೇಲೆ ಬಂದ ಮೇಲೆ ಧಕ್ಕೆ ಆಗುತ್ತೆ ಎಂದು ಅನ್ನಿಸಿದೆಯಾ?**

ಮೊದಲು ತೆರೆಯ ಹಿಂದೆ ಹೆಚ್ಚು ಕೆಲಸ ಮಾಡುತ್ತಿದ್ದೆ. ನಟಿಸುವವರಿಗೆ ಹಾಗೆ ಮಾಡಬೇಕು ಹೀಗೆ ಮಾಡಬೇಕು ಎಂದು ಹೇಳಿಕೊಡುತ್ತಿದ್ದೆ. ನಾನು ಬಣ್ಣ ಹಚ್ಚಿ ಅದನ್ನೇ ಮಾಡಲು ಶುರುಮಾಡಿದ ಮೇಲೆ ಹೀಗಾ ಎನ್ನುವುದು ಗೊತ್ತಾಯಿತು. ಬಣ್ಣ ಹಚ್ಚಿದ ಮೇಲೆ ಪಾತ್ರಕ್ಕೆ ನ್ಯಾಯ ಕೊಡುವುದು ಮುಖ್ಯ. ಅದಕ್ಕಾಗಿ ಪಾತ್ರದಂತೆ ನಮ್ಮನ್ನು ನಾವು ಬದಲಿಸಿಕೊಳ್ಳಬೇಕಾಗುತ್ತದೆ. ಸುದ್ದಿ ಸಂಸ್ಥೆಯ ಕೆಲಸಕ್ಕೂ ಮನರಂಜನಾ ಟೀವಿಯ ಕೆಲಸ ಸಂಪೂರ್ಣ ಭಿನ್ನ. ತೆರೆಯ ಕಾರಣಕ್ಕೆ ಹೊರಗಡೆ ನನ್ನನ್ನು ಹೆಚ್ಚು ಜನ ಗುರುತಿಸುತ್ತಿದ್ದಾರೆ. ಇದು ನನಗೆ ಖುಷಿಯನ್ನು ಕೊಟ್ಟಿದೆ.

◆ **ಅಭಿನಯವನ್ನು ಹೇಗೆ ಕಲಿತಿದ್ದು?**

ಚಿತ್ರರಂಗದಲ್ಲಿ ಏನಾದರೂ ಮಾಡಬೇಕು ಎಂದು ಬಂದಿದ್ದೆ. ಅಭಿನಯದ ಬಗ್ಗೆ ಬಾಲ್ಯದಿಂದಲೂ ಅಭಿಲಾಷೆ ಇತ್ತು. ಏಕಪಾತ್ರಾಭಿನಯ ಮಾಡುತ್ತಿದ್ದೆ. ಹಾಡುಗಳನ್ನು ಹಾಡುತ್ತಿದ್ದೆ. ಮಿಮಿಕ್ರಿ ಮಾಡುತ್ತಿದ್ದೆ. ಇದು ನಾನು ನಟ ಆಗಲು ಸಹಾಯ ಮಾಡಿತು. ಇದೇ ನನ್ನನ್ನು ಅಭಿನಯಕ್ಕೆ ತಂದಿದೆ.

◆ **ನಿರ್ದೇಶನದ ಅವಕಾಶ ಸಿಕ್ಕರೆ ಏನು ಮಾಡುತ್ತೀರಿ?**

ಸಿನಿಮಾ ರಂಗದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಯೋಚಿಸಬೇಕು. ನಿರ್ದೇಶನದಲ್ಲಿ ಕಲಿಯುವುದು ಸಾಕಷ್ಟು ಇದೆ. ಹಣ ಹೂಡುವವರ ಹಣವನ್ನು ಹಿಂದಿರುಗಿಸಲು ಸಾಧ್ಯ ಎನ್ನುವುದಾದರೆ ಮಾಡುತ್ತೇನೆ. ಇಲ್ಲದಿದ್ದರೆ ಅನುಮಾನ. ಸದ್ಯಕ್ಕಂತೂ ಆ ಕೆಲಸದ ಬಗ್ಗೆ ಒಲವು ಕಡಿಮೆ ಆಗಿದೆ. ನಟನೆಯನ್ನೇ ಮಾಡಬೇಕು ಎನ್ನುವ ಆಸೆ. ಒಳ್ಳೆಯ ಪಾತ್ರಗಳನ್ನು ಹೆಚ್ಚು ಹೆಚ್ಚು ಮಾಡಬೇಕು.

◆ **ಊರು ಬಿಟ್ಟು ಬಂದ ನಿಮ್ಮ ಇವತ್ತಿನ ಬದುಕು ಹೇಗಿದೆ?**

ನಮ್ಮದು ಕೃಷಿ ಕುಟುಂಬ. ಚಿಕ್ಕವಯಸ್ಸಿನಿಂದಲೇ ನನಗೆ ಕೆಲಸ ಮಾಡುವ ಒತ್ತಡ ಇತ್ತು. ಜೀವನದ ಕಷ್ಟ ಏನು ಅನ್ನುವುದನ್ನು ಅಪ್ಪ ಆಗಲೇ ಪರಿಚಯಿಸಿದ್ದರು. ದರ್ಶನ್ ತೂಗುದೀಪ ನಟನೆಯ 'ನಮ್ಮ ಪ್ರೀತಿಯ ರಾಮು' ಸಿನಿಮಾಕ್ಕೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತು. ಆ ಧೈರ್ಯದ ಮೇಲೆ ಮನೆ ಬಿಟ್ಟು ಬೆಂಗಳೂರಿಗೆ ಬಂದೆ. ಸಿನಿಮಾರಂಗ ಹೇಗಿರುತ್ತೆ, ಎಂತಹ ಜನ ಅಲ್ಲಿ ಇರ್ತಾರೆ. ದುಡಿಮೆಯ ಸಾಧ್ಯತೆಗಳ ಬಗ್ಗೆ ಯಾವ ಮಾಹಿತಿ ಇಲ್ಲದೆ ಬೆಂಗಳೂರಿಗೆ ಬಂದೆ. ಈಗ ಬದುಕು ತುಂಬ ಚೆನ್ನಾಗಿದೆ.

■ **ರಾಘವೇಂದ್ರ ಕೆ.**